ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ.ಡಿಟಿಇ 01 ಇಎಸ್‌ಟಿ 4(ಎ)(2) 2018/1846

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ,
ಬೆಂಗಳೂರು - 560 001,
ದಿನಾಂಕ: 21.07.2018.

**ಸುತ್ತೋಲೆ**

**ವಿಷಯ:** ಎಐಸಿಟಿಇ ಯಲ್ಲಿ ವಿವಿಧ ಕಮಿಟಿಗಳಲ್ಲಿ ತಜ್ಞರಾಗಿ ಕೆಲಸ ಮಾಡಲು ಹಾಗೂ ವಿವಿಧ ಸಂಸ್ಥೆಗಳಿಗೆ ಭೇಟಿ ನೀಡಲು ಇಚ್ಚಿಸುವ ಬೋಧಕ ಸಿಬ್ಬಂದಿಗಳ ಪಟ್ಟಿಯನ್ನು ಸಲ್ಲಿಸುವ ಬಗ್ಗೆ.

**ಉಲ್ಲೇಖ:** ಪ್ರಾದೇಶಿಕ ಅಧಿಕಾರಿ, ಎಐಸಿಟಿಇ ಇವರ ಪತ್ರ ಸಂಖ್ಯೆ: 11-1/Experts/2018/SWRO ದಿನಾಂಕ: 11.07.2018.

*-*-*-*-*-*-*

ಉಲ್ಲೇಖ (1) ರ ಪ್ರಾದೇಶಿಕ ಅಧಿಕಾರಿ, ಎಐಸಿಟಿಇ ಪತ್ರದಲ್ಲಿ ಎಐಸಿಟಿಇಯು ಪ್ರತಿವರ್ಷ ತಜ್ಞರ ಪಟ್ಟಿಯನ್ನು ನವೀಕರಿಸುತ್ತಿದ್ದು, ಎಐಸಿಟಿಇಯ ವಿವಿಧ ಕಮಿಟಿಗಳಲ್ಲಿ ತಜ್ಞರಾಗಿ ಕೆಲಸ ಮಾಡಲು ಹಾಗೂ ವಿವಿಧ ಸಂಸ್ಥೆಗಳಿಗೆ ಭೇಟಿ ನೀಡಲು ಇಚ್ಚಿಸುವ ಕರ್ನಾಟಕ ರಾಜ್ಯದಲ್ಲಿನ ಎಐಸಿಟಿಇಯಿಂದ ಮಾನ್ಯತೆ ಪಡೆದ ಸರ್ಕಾರಿ ಮತ್ತು ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಂಯೋಜಿತ ಪ್ರಾಧ್ಯಾಪಕರು ಮತ್ತು ಪ್ರಾಧ್ಯಾಪಕರುಗಳ ಪಟ್ಟಿಯನ್ನು ಸಲ್ಲಿಸುವಂತೆ ತಿಳಿಸಿರುತ್ತಾರೆ. ಸದರಿ ಬೋಧಕ ಸಿಬ್ಬಂದಿಗಳಿಗೆ ಯಾವುದೇ ದೂರು/ವಿಚಾರಣೆ ಪ್ರಕರಣಗಳು ಇರಬಾರದು. ಅದರಂತೆ, ಎಐಸಿಟಿಇಯ ವಿವಿಧ ಕಮಿಟಿಗಳಲ್ಲಿ ತಜ್ಞರಾಗಿ ಕೆಲಸ ಮಾಡಲು ಹಾಗೂ ವಿವಿಧ ಸಂಸ್ಥೆಗಳಿಗೆ ಭೇಟಿ ನೀಡಲು ಇಚ್ಚಿಸುವ ಅನುದಾನಿತ ಇಂಜಿನಿಯರಿಂಗ್ ಕಾಲೇಜಿನ ಬೋಧಕ ಸಿಬ್ಬಂದಿಗಳ ಪಟ್ಟಿಯನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ(Excel format) ನಿರ್ದೇಶನಾಲಯಕ್ಕೆ ಸಲ್ಲಿಸುವಂತೆ ತಿಳಿಸಲಾಗಿದೆ.

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ

ಇವರಿಗೆ,
ಎಲ್ಲಾ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರಿಗೆ.

ಅಡಕ: ನಮೂನೆ.

ಪ್ರತಿ: ಇ- ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. (ಇಲಾಖಾ ಜಾಲತಾಣದಲ್ಲಿ ಪ್ರಕಟಿಸಲು)